ಶ್ರೀ ಕೆ. ಅಮರನಾಥ್ ಶೆಟ್ಟಿ :- ಮಾನ್ಯ ಉಪಾಧ್ಯಕ್ಷರೇ, ಇವತ್ತು ಮಂಗಳೂರು ಒಳಚರಂಡಿ ವ್ಯವಸ್ಥೆ ಅಭಿವೃದ್ಧಿ ಬಗ್ಗೆ ಈಗಾಗಲೇ ಸೂರತ್ಕಲ್‌ನ ಕರ್ನಾಟಕ ರೀಜನಲ್ ಇಂಜಿನೀಯರಿಂಗ್ ಕಾಲೇಜು, ರವರಿಂದ ಸರ್ವೆ ಮಾಡಿಸಿ ಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದೀರಿ. ಆದಷ್ಟು ಬೇಗನೆ ಇದನ್ನು ಸರಿಪಡಿಸುವ ವ್ಯವಸ್ಥೆಯನ್ನು ಮಾಡಬೇಕಾಗಿದೆ. ನಂತರ ಇನ್ನೊಂದು ಕಡೆಯಲ್ಲಿ ಪರಿಸರ ಮಾಲಿನ್ಯ ಏನು ಆಗುತ್ತಿಲ್ಲ ಎಂದು ಹೇಳುತ್ತಿದ್ದೀರಿ; ಆದರೆ ಇದರಿಂದಾಗಿ ಮಂಗಳೂರಿನಲ್ಲಿ ಮಲೇರಿಯಾ ಬಹಳಷ್ಟು ಕಡೆಗಳಲ್ಲಿ ಹರಡಿರುವುದ ರಿಂದ, ಇದನ್ನು ಕೂಡಲೇ ಸರಿಪಡಿಸಲಿಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಯು. ಆರ್. ಸಭಾಪತಿ :- ಮಂಗಳೂರು ನಗರ ಒಳಚರಂಡಿ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಲು ಸಮೀಕ್ಷೆಯನ್ನು ನಡೆಸಿ ಅದರ ರೂಪರೇಷೆಗಳನ್ನು ತಯಾರಿಸಲು ಕರ್ನಾಟಕ ರೀಜನಲ್ ಇಂಜಿನೀಯರಿಂಗ್ ಕಾಲೇಜು, ಸೂರತ್ಕಲ್, ಇವರನ್ನು ಕೋರಲಾಗಿದೆ ಎಂದು ಹೇಳಿದ್ದೀರಿ. ಇದನ್ನು ಯಾವಾಗ ಕೋರಿದ್ದೀರಿ? ಇದರ ರಿಪೋರ್ಟ್ ಯಾವಾಗ ಬರುತ್ತದೆ? ಈಗಾಗಲೇ ಮಂಗಳೂರಿನಲ್ಲಿ ಬಹಳಷ್ಟು ಗೊಂದಲಮಯ ವಾತಾವರಣ ಉಂಟಾಗಿದೆ. ಒಳ ಚರಂಡಿಯ ಅವ್ಯವಸ್ಥೆಯಿಂದಾಗಿ. ನಿವು ಸೂರತ್ಕಲ್ ಇಂಜಿನೀಯರ್ ಕಾಲೇಜಿನವರಿಗೆ ಕೋರ ಲಾಗಿದೆ ಎಂದು ಹಾರಿಕೆಯ ಉತ್ತರ ಕೊಟ್ಟ ಹಾಗೆ ಆಗಿದೆ. ಒಂದು ವೇಳೆ ಕೊಟ್ಟಿದ್ದೀರಿ ಆದರೆ, ಯಾವಾಗ ಕೊಟ್ಟಿದ್ದೀರಿ? ಇದರ ಉತ್ತರವನ್ನು ಯಾವಾಗ ನಿರೀಕ್ಷಿಸುತ್ತಿದ್ದೀರಿ? ಇದು ಬಹಳ ಗಂಭೀರವಾದಂತಹ ಪ್ರಶ್ನೆ. ಇದನ್ನು ಬಹಳ ಗಂಭೀರವಾಗಿ ನೀವು ನೋಡಬೇಕಾಗಿದೆ. ಈ ರೀತಿಯ ಹಾರಿಕೆ ಉತ್ತರ ಸರಿಯಲ್ಲ. ದಯವಿಟ್ಟು ಇದರ ಬಗ್ಗೆ ಸ್ಪಷ್ಟೀಕರಣ ಕೊಡುತ್ತೀರಾ?

ಶ್ರೀ ವೈಜನಾಥ ಪಾಟೀಲ್ :- ಸೂರತ್ಕಲ್ ಇಂಜನೀಯರಿಂಗ್ ಕಾಲೇಜಿನವರಿಗೆ ಸರ್ವೆ ಮಾಡುವ ಸಲುವಾಗಿ ಕೇಳಲಾಗಿದೆ. ಆ ಸರ್ವೆ ರಿಪೋರ್ಟನ್ನು ಆದಷ್ಟು ಬೇಗ ತರಿಸಲಿಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಈಗ ಆ ಭಾಗದಲ್ಲಿ ಕೆಲವು ರೋಗಗಳು ಹರಡುತ್ತಾ ಇವೆ, ಎಂದು ಮಾನ್ಯ ಅಮರನಾಥ್ ಶೆಟ್ಟಿಯವರು ಹೇಳಿದ್ದಾರೆ. ಅದರ ಸಲುವಾಗಿ ಸ್ಥಳಕ್ಕೆ ಭೇಟಿ ಕೊಟ್ಟು ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ. ಮತ್ತು ಆರೋಗ್ಯ ಮಂತ್ರಿ ಗಳಿಗೂ ಕೂಡ ಇದರ ಬಗ್ಗೆ ಅವರ ಜೊತೆಯಲ್ಲಿ ಸಮಾಲೋಚಿಸಿ, ಯಾವ ರೋಗಗಳು ಹರಡುತ್ತಾ ಇವೆ, ಅದನ್ನು ತಡೆಯಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಉಪಾಧ್ಯಕ್ಷರು :- ಪ್ರಶ್ನೆ ನಂ. 402 (3050) ಕ್ಕೆ ಸಮಯ ತೆಗೆದುಕೊಂಡಿದ್ದಾರೆ.

ಶ್ರೀ ಜಿ. ಚಂದ್ರಣ್ಣ :- ಈ ಸಭೆ ಪ್ರಾರಂಭವಾದಾಗಲೇ ಹಾಕಿದ ಪ್ರಶ್ನೆ ಇದು. ಇಲ್ಲಿಯವರೆಗೂ ಬಂದಿಲ್ಲ ಅಂದರೆ, ಬಹಳ ಕಷ್ಟ. ಏಕೆಂದರೆ ರೇಷ್ಮೆ ಬಗ್ಗೆ ತಿಳಿದುಕೊಳ್ಳಬೇಕಾದ ಅನೇಕ ವಿಷಯಗಳು ಇವೆ. ರಾಜ್ಯದಲ್ಲಿ ಅನೇಕ ಸಮಸ್ಯೆಗಳು ಇವೆ. ಅದರ ಬಗ್ಗೆ ಕೇಳುವಂತದ್ದು ಬೇಕಾದಷ್ಟು ಇದೆ. ಈ ಒಂದು ಉತ್ತರವನ್ನು ಕೊಡಲಿಲ್ಲ ಅಂದರೆ ಬಹಳ ಕಷ್ಟವಾಗುತ್ತದೆ. ಮಂತ್ರಿಗಳಿಗೆ ಕಾಳಜಿ ಇಲ್ಲ ಎಂದು ನಾನು ಹೇಳಬೇಕಾಗುತ್ತದೆ. ಇದರ ಬಗ್ಗೆ ಅವರಿಗೆ ಸೂಚನೆ ಕೊಟ್ಟು, ನನಗೆ ಸರಿಯಾದ ಉತ್ತರ ಕೊಡಿಸುವ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು :- ರೇಷ್ಮೆ ಇಲಾಖೆಯ ಮಂತ್ರಿಗಳಿಗೆ ಹೇಳುತ್ತೇನೆ. ಕಾನೂನು ಮಂತ್ರಿ ಗಳು ರೇಷ್ಮೆ ಇಲಾಖೆಯ ಮಂತ್ರಿಗಳಿಗೆ ಹೇಳಿ ಜಿ. ಚಂದ್ರಣ್ಣನವರ ಪ್ರಶ್ನೆಗೆ ಉತ್ತರ ಕಳುಹಿಸಿಕೊಡುವ ವ್ಯವಸ್ಥೆ ಮಾಡಿಸಬೇಕು.

ಶ್ರೀ ಎಂ. ಸಿ. ನಾಣಯ್ಯ :- ಒಂದು ವಾರ ಟೈಮ್ ಕೊಡಿಸಿ.

ಉಪಾಧ್ಯಕ್ಷರು :- ಅವರಿಗೆ ಉತ್ತರ ಕಳುಹಿಸಿ ಕೊಡಿ.

ಶ್ರೀ ಎಂ. ಸಿ. ನಾಣಯ್ಯ :- ಅವರಿಗೆ ಉತ್ತರ ಒದಗಿಸಿಕೊಡುತ್ತೇನೆ.

ವಿಷಯ :- ಘಟಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯಿಂದ ಕಬ್ಬಿಗೆ ನಿಗದಿ ಪಡಿಸಿದ ದರ.

ಚುಕ್ಕಿ ಗುರುತಿನ ಪ್ರಶ್ನೆ ಸಂಖ್ಯೆ 414 (2992)

ಶ್ರೀ ವಿ. ಎಸ್. ಕೌಜಲಗಿ (ಅರಭಾವಿ) :- ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ, ಪರಿಸರ ಹಾಗೂ ಜೀವಪರಿಸ್ಥಿತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಘಟಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯು 1995-96ನೇ ಸಾಲಿನಲ್ಲಿ ನುರಿಸಿದ ಕಬ್ಬು ಎಷ್ಟು ಹಾಗೂ ಈ ಸಾಲಿನಲ್ಲಿ ಪ್ರತಿ ಟನ್ ಕಬ್ಬಿಗೆ ನಿಗದಿಪಡಿಸಿದ ದರವೆಷ್ಟು? ಮತ್ತು ಈಗ ರೈತರಿಗೆ ಪಾವತಿ ಮಾಡಿದ ಹಣವೆಷ್ಟು;

ಆ) ರೈತರಿಗೆ ಪಾವತಿ ಮಾಡಲು ಬೇಕಾದ ಹಣವನ್ನು ಯಾವ ಯಾವ ಸಂಘ ಸಂಸ್ಥೆಗಳಿಂದ ಕಾರ್ಖಾನೆಯವರು ಯಾವ ರೂಪದಲ್ಲಿ ಪಡೆದುಕೊಂಡಿರುವರು; (ವಿವರ ನೀಡುವುದು)

ಇ) ಪ್ರಸ್ತುತ ಹಂಗಾಮಿನಲ್ಲಿ ಉತ್ಪಾದಿಸಿದ ಸಕ್ಕರೆ ಪ್ರಮಾಣವೆಷ್ಟು? ಹಾಗೂ ಈಗ ಮಾರಾಟವಾಗದೆ ಕಾರ್ಖಾನೆಯ ಉಳಿದ ಸಕ್ಕರೆ ಎಷ್ಟು?

ಶ್ರೀ ಪಿ. ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ, ಯಂತ್ರಕಲೆ, ಪರಿಸರ ಹಾಗೂ ಜೀವಪರಿಸ್ಥಿತಿ ಶಾಸ್ತ್ರ ರಾಜ್ಯ ಸಚಿವರು) :-

ಅ) ಘಟಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯು 1995-96 ನೇ ಸಾಲಿಗೆ ಕಬ್ಬು ಅರೆಯುವ ಹಂಗಾಮನ್ನು ಇನ್ನೂ ಪ್ರಾರಂಭಿಸಿರುವುದಿಲ್ಲ. 94-95 ನೇ ಸಾಲಿಗೆ ಕಾರ್ಖಾನೆಯು 3.54 ಲಕ್ಷ ಮೆ. ಟನ್ ಕಬ್ಬು ನುರಿಸಿರುತ್ತದೆ. 1994-95 ನೇ ಸಾಲಿಗೆ ಕಾರ್ಖಾನೆಯು ಪ್ರತಿ ಟನ್ನಿಗೆ ಕಬ್ಬಿಗೆ ರೂ. 611.00 ನ್ನು ಮೊದಲನೆಯ ಮುಂಗಡವಾಗಿಯೂ ಮತ್ತು ಸಾಗಾಣಿಕೆ ಮತ್ತು ತೋಡ್ಡಿ ಎಂಬುದಾಗಿ ರೂ 75.00 ನ್ನು ಪಾವತಿ ಮಾಡಿದೆ. ಅಂತಿಮ ದರವನ್ನು ನಿಗದಿಪಡಿಸಿರುವುದಿಲ್ಲ.

ಆ) ರೈತರಿಗೆ ಪಾವತಿಸಬೇಕಾದ ಹಣವನ್ನು ಬೆಳಗಾಂ ಜಿಲ್ಲಾ ಸಹಕಾರಿ ಬ್ಯಾಂಕಿನಿಂದ ಸಕ್ಕರೆಯ ಅಡವು ಸಾಲ ಪಡೆದು ನೀಡಲಾಗಿದೆ. ಇನ್ನಾವ ಸಂಸ್ಥೆಯಿಂದಲೂ ಸಾಲ ಪಡೆದಿರುವುದಿಲ್ಲ.

ಇ) 94-95 ನೇ ಹಂಗಾಮಿನಲ್ಲಿ ಕಾರ್ಖಾನೆಯು 4,00,390 ಕ್ವಿಂಟಾಲ್ ಸಕ್ಕರೆಯನ್ನು ಉತ್ಪಾದಿಸಿದೆ. ಈ ಪೈಕಿ ಮಾರಾಟವಾಗದೆ ಉಳಿದಿರುವ ಸಕ್ಕರೆಯ ಪ್ರಮಾಣ 1,69,362 ಕ್ವಿಂಟಾಲ್.